# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 372(495 + 491) |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ + ಸುನೀಲ್‌ಗೌಡ.ಬಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-12-2022. |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಪ್ರಸ್ತುತ ನೀಡುತ್ತಿರುವ ಗೌರವಧನ ಹಾಗೂ ಇನ್ನಿತರ ಸೌಲಭ್ಯಗಳು ಯಾವುವು? (ವಿವರ ನೀಡುವುದು). | ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಮತ್ತು ಸದಸ್ಯರುಗಳಿಗೆ ನೀಡಲಾಗುವ ಸೌಲಭ್ಯಗಳು-<br>1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 116 ಜಿಪಸ, ದಿನಾಂಕ:03.05.2017 ರ ಪ್ರಕಾರ ದಿನಾಂಕ:01.04.2017 ರಿಂದ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ರೂ.3,000/-, ಉಪಾಧ್ಯಕ್ಷರುಗಳಿಗೆ ರೂ.2,000/- ಹಾಗೂ ಸದಸ್ಯರುಗಳಿಗೆ ರೂ.1,000/-ಗಳ ಮಾಸಿಕ ಗೌರವಧನ ನೀಡಲಾಗುತ್ತಿದೆ.<br>2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 155 ಜಿಪಸ 2003, ದಿನಾಂಕ:01.08.2003 ರನ್ವಯ ಪ್ರತಿ ಸಭೆಗೆ ರೂ.100/-ಗಳ ಉಪವೇಶನ ಶುಲ್ಕವನ್ನು ನೀಡಲಾಗುತ್ತಿದೆ.<br>3. ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಗ್ರಾಮ ಪಂಚಾಯತಿ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯತಿ ಪರಿಮಿತಿಗಳಾಚೆ ಮಾಡಿದ ಪ್ರಯಾಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, 1994 ರನ್ವಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ಹಾಲಿ ನೀಡುತ್ತಿರುವ ಗೌರವಧನವು ಕಳೆದ 5 ವರ್ಷಗಳಿಂದ ಸಲ್ಲಿಕೆಯಾಗದಿರುವುದು ಸರ್ಕಾರದ ಗಮನದಲ್ಲಿದೆಯೇ ಪಕ್ಕದ ರಾಜ್ಯವಾದ ಕೇರಳದಲ್ಲಿ ನೀಡುವ ಗೌರವಧನದಂತೆ ನಮ್ಮ ರಾಜ್ಯದ ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಗೌರವಧನ ನೀಡಲು ಸರ್ಕಾರದ ಕ್ರಮವೇನು; ಗೌರವಧನವನ್ನು ಹೆಚ್ಚಿಸಲು ಅನುದಾನದ ಕೊರತೆ ಇದೆಯೇ; (ವಿವರ ನೀಡುವುದು). | ಗೌರವಧನವು ಕಳೆದ 5 ವರ್ಷಗಳಿಂದ ಪರಿಷ್ಕರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 126 ಜಿಪಸ 2022, ದಿನಾಂಕ:18.12.2022 ರಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ಮಾಸಿಕ ರೂ.6,000/-, ಉಪಾಧ್ಯಕ್ಷರುಗಳಿಗೆ ಮಾಸಿಕ ರೂ.4,000/- ಹಾಗೂ ಸದಸ್ಯರುಗಳಿಗೆ ಮಾಸಿಕ ರೂ.2,000/-ಗಳ ಗೌರವಧನವನ್ನು ಪರಿಷ್ಕರಿಸಿ ನಿಗದಿಗೊಳಿಸಲಾಗಿದೆ. |

| | | |
|---|---|---|
| (ಇ) | ಪ್ರಸ್ತುತ ಗ್ರಾಮ ಪಂಚಾಯತ್ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಸದಸ್ಯರುಗಳ ಗೌರವಧನವನ್ನು ಹೆಚ್ಚಿಸಲು ಸರ್ಕಾರದ ಕ್ರಮವೇನು; ಗ್ರಾಮ ಪಂಚಾಯತ್ ಸದಸ್ಯರು ಕೆಲಸದ ನಿಮಿತ್ತ ತಮ್ಮ ಪಂಚಾಯತಿಯ ವ್ಯಾಪ್ತಿಯನ್ನು ಬಿಟ್ಟು ಪ್ರಯಾಣ ಮಾಡಿದಾಗ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ಸಹ ಪರಿಷ್ಕರಿಸಿ ಉಚಿತ ಬಸ್ ಪಾಸ್/ ವಿಮಾ ಸೌಲಭ್ಯ/ಆರೋಗ್ಯ ಕಾರ್ಡ್ ಗಳನ್ನು ಒದಗಿಸಲು ಸರ್ಕಾರದ ನಿಲುವೇನು? | ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 126 ಜಿಪಸ 2022, ದಿನಾಂಕ:18.12.2022 ರಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ರೂ.6,000/-, ಉಪಾಧ್ಯಕ್ಷರುಗಳಿಗೆ ರೂ.4,000/- ಹಾಗೂ ಸದಸ್ಯರುಗಳಿಗೆ ರೂ.2,000/-ಗಳ ಮಾಸಿಕ ಗೌರವಧನವನ್ನು ಪರಿಷ್ಕರಿಸಿ ನಿಗದಿಗೊಳಿಸಲಾಗಿದೆ.<br>ಗ್ರಾಮ ಪಂಚಾಯತ್ ವ್ಯಾಪ್ತಿಯ ಹೊರಗೆ ಗ್ರಾಮ ಪಂಚಾಯತ್ ಚುನಾಯಿತ ಪ್ರತಿನಿಧಿಗಳು ಕೈಗೊಳ್ಳುವ ಅಧಿಕೃತ ಪ್ರಯಾಣಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಪಡೆಯಲು ಅವಕಾಶವಿದೆ.<br>ಆದರೆ ಉಚಿತ ಬಸ್ ಪಾಸ್ ವಿಮಾ ಸೌಲಭ್ಯ/ಆರೋಗ್ಯ ಕಾರ್ಡ್ ಗಳನ್ನು ಒದಗಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಈ) | ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ರೂ.5000/- ಉಪಾಧ್ಯಕ್ಷರಿಗೆ ರೂ. 4000/- ಮತ್ತು ಸದಸ್ಯರಿಗೆ ರೂ. 3000/- ಗೌರವಧನ ನೀಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ ಯಾವ ಕಾಲಮಿತಿಯಲ್ಲಿ ಗೌರವಧನ ಹೆಚ್ಚಿಸಲಾಗುವುದು. (ವಿವರ ನೀಡುವುದು). | ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 126 ಜಿಪಸ 2022, ದಿನಾಂಕ:18.12.2022 ರಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ರೂ.6,000/-, ಉಪಾಧ್ಯಕ್ಷರುಗಳಿಗೆ ರೂ.4,000/- ಹಾಗೂ ಸದಸ್ಯರುಗಳಿಗೆ ರೂ.2,000/-ಗಳ ಮಾಸಿಕ ಗೌರವಧನವನ್ನು ಪರಿಷ್ಕರಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ. |

**ಸಂಖ್ಯೆ: ಗ್ರಾಅಪಂರಾ 540 ಜಿಪಸ 2022**

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ